# ಕಲಿಕೆಯ ಉನ್ನತಿಗೆ 'ಗ್ಲೈಡ್' ನೆರವು

**ತಂತ್ರಜ್ಞಾನ ಆಧರಿತ ಶಿಕ್ಷಣಕ್ಕೆ ಆದ್ಯತೆ ನೀಡುವ 'ಗ್ರೇಟ್ ಲರ್ನಿಂಗ್' ಈಗ 'ಎಐ ಮೆಂಟರ್' ಹಾಗೂ 'ಎಐ ಟೀಚರ್' ಮೂಲಕ ವಿದ್ಯಾರ್ಥಿಗಳಿಗೆ ಇನ್ನಷ್ಟು ಆಪ್ತವಾಗುವತ್ತ ಹೆಜ್ಜೆಯಿಟ್ಟಿದೆ.**

■ ಶಶಿಕುಮಾರ್ ಸಿ.

ಎಡ್‌ಟೆಕ್ ಕಂಪನಿಯಾಗಿ ಜಾಗತಿಕವಾಗಿ ಗುರುತಿಸಿಕೊಂಡಿರುವ ಗ್ರೇಟ್ 'ಲರ್ನಿಂಗ್' ಕಂಪನಿಯು ತನ್ನ ಸೇವೆಯಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನಕ್ಕೆ ಆದ್ಯತೆ ನೀಡಿದೆ. ಈ ಮೂಲಕ ಕಲಿಕೆಯ ವಿಧಾನವನ್ನು ಸುಲಭಗೊಳಿಸುವತ್ತ ದಾಪುಗಾಲಿಟ್ಟಿದೆ. ಅದರ ಭಾಗವಾಗಿ ಈಚೆಗೆ 'ಎಐ ಮೆಂಟರ್' ಮತ್ತು 'ಎಐ ಟೀಚರ್' ಎಂಬ ಎರಡು ಹೊಸ ಸೇವೆಗಳನ್ನು ಆರಂಭಿಸಿದ್ದು, ಇವೆರಡು ಕಂಪನಿಯು 'ಗ್ಲೈಡ್' ಎಂಬ ಹೊಸ ಬ್ರ್ಯಾಂಡ್‌ನಡಿ ಲಭ್ಯವಾಗಲಿವೆ.

'ಎಐ ಮೆಂಟರ್' ಹಾಗೂ 'ಎಐ ಟೀಚರ್' ಜೊತೆಗೆ ಭವಿಷ್ಯದಲ್ಲಿ ಅಭಿವೃದ್ಧಿಪಡಿಸುವ ಕೃತಕ ಬುದ್ಧಿಮತ್ತೆ ಆಧರಿತ ಕಲಿಕಾ ಸೇವೆಗಳನ್ನು ಗ್ಲೈಡ್ ಹೆಸರಿನಡಿಯೇ ಕಂಪನಿಯು ಪರಿಚಯಿಸಲಿದೆ. ಜಿಎಲ್ (GL–ಗ್ರೇಟ್ ಲರ್ನಿಂಗ್) ಹಾಗೂ ಎಐಡಿಇ (aide–ಸಹಾಯ), ಸೇರಿದಾಗ ಗ್ಲೈಡ್ (Gl+aide=Glaide) ಆಗುತ್ತದೆ. ಇದರರ್ಥ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಕಲಿಕೆಯ ವಿಧಾನವು ಇನ್ನಷ್ಟು ಸುಲಭವಾಗುತ್ತದೆ ಎಂಬುದು. ತಂತ್ರಜ್ಞಾನ ಬಳಸಿಕೊಂಡು ಬೋಧನೆ, ಕಲಿಕೆ ಮತ್ತು ಶೈಕ್ಷಣಿಕ ನಿರ್ವಹಣೆಗೆ ಪೂರಕವಾದ ಸೇವೆಗಳನ್ನು ಅಭಿವೃದ್ಧಿಪಡಿಸುವ ಸಂಸ್ಥೆಗಳನ್ನು ಎಡ್‌ಟೆಕ್ ಎನ್ನಲಾಗುತ್ತದೆ.



ನಾನಾ ಕಾರಣಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಾರೆ. ಅಂಥವರು ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ಪಡೆಯಲು ಗ್ಲೈಡ್ ಉತ್ತಮ ವೇದಿಕೆ. ವೃತ್ತಿಪರ ಕಲಿಕೆ ಮತ್ತು ಕೌಶಲ ಮೈಗೂಡಿಸಿಕೊಳ್ಳಲು ಸಹಾಯಕವಾಗಿದೆ. ಇನ್ನು ಎಐ ಸದ್ಯದ ಭವಿಷ್ಯ. ಹೀಗಾಗಿ ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳು ಎಐ ಮೆಂಟರ್ ಹಾಗೂ ಎಐ ಟೀಚರ್ ಬಳಸಿಕೊಂಡು ಕಾಲಕಾಲಕ್ಕೆ ಅಪ್‌ಡೇಟ್ ಆಗಬಹುದು.




## ಏನಿದು ಎಐ ಮೆಂಟರ್?

ಎಐ ಮೆಂಟರ್ ವಿದ್ಯಾರ್ಥಿಗಳಿಗೆ ಸಲಹೆಗಾರನಂತೆ ನೆರವಾಗಲಿದೆ. ಇದರೊಂದಿಗಿನ ಸಂವಹನವೂ ಸರಳ. ಶೈಕ್ಷಣಿಕವಾಗಿ ವಿದ್ಯಾರ್ಥಿಗಳ ಸಂದೇಹ ನಿವಾರಣೆ ಮಾಡಲು ನೆರವಾಗುವ ಇದಕ್ಕೆ, ದೇಶ–ವಿದೇಶದ ನುರಿತ ಶಿಕ್ಷಣ ತಜ್ಞರಿಂದ ನಿಖರವಾದ ಮಾಹಿತಿಯನ್ನು ಪಡೆದು ಫೀಡ್ ಮಾಡಲಾಗಿದೆ. ಯಾವುದೇ ರೀತಿಯಲ್ಲೂ ವಿದ್ಯಾರ್ಥಿಗಳಿಗೆ ತಪ್ಪು ಮಾಹಿತಿ ಒದಗಿಸದಂತೆ ಎಚ್ಚರವಹಿಸಲಾಗಿದೆ.

ಶಿಕ್ಷಕರು, ಉಪನ್ಯಾಸಕರು ತರಗತಿ, ಟ್ಯೂಷನ್‌ಗಳಲ್ಲಿ ಸೀಮಿತ ಅವಧಿಯಲ್ಲಷ್ಟೇ ಲಭ್ಯ. ಆದರೆ ಎಐ ಮೆಂಟರ್ 24/7ನಂತೆ ವಿದ್ಯಾರ್ಥಿಗಳ ನೆರವಿಗೆ ಸದಾ ನಿಲ್ಲಲಿದೆ. ಉನ್ನತ ಶಿಕ್ಷಣ ಮಾಡುತ್ತಿರುವ ವಿದ್ಯಾರ್ಥಿಗಳಿಗಂತೂ ಹೆಚ್ಚಿನ ಪ್ರಯೋಜನವಾಗಲಿದೆ. ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಎದುರಾಗುವ ಸಂದೇಹಗಳನ್ನು ನೆಚ್ಚಿನ ಶಿಕ್ಷಕರು, ಉಪನ್ಯಾಸಕರಂತೆಯೇ ಇದೂ ಬಗೆಹರಿಸುತ್ತದೆ.

ಕೋಡಿಂಗ್ ಕಲಿಕೆಯಂತಹ ಜಟಿಲ ಕೋರ್ಸ್‌ಗಳನ್ನು ಕಲಿಯುವ ವೇಳೆ ಎದುರಾಗುವ ಸಮಸ್ಯೆಗಳನ್ನು ಸುಲಭವಾಗಿ, ಸರಳವಾಗಿ ವಿದ್ಯಾರ್ಥಿಗಳಿಗೆ ಅರ್ಥೈಸುವ ಎಐ ಮೆಂಟರ್, ಸಾಧ್ಯವಿರುವ ಬೇರೆಲ್ಲಾ ಮಾರ್ಗಗಳ ಮೂಲಕ ಪರ್ಯಾಯ ಉತ್ತರಗಳನ್ನು ಒದಗಿಸುತ್ತದೆ. ಸಮಸ್ಯೆಯನ್ನು ಇದು ಬಗೆಹರಿಸುವ ವಿಧಾನವೇ ವಿನೂತನ.

ಕೋಡಿಂಗ್ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಯೊಬ್ಬ ಸಮಸ್ಯೆಯೊಂದರಲ್ಲಿ ಸಿಲುಕಿದ್ದಾನೆ ಎಂದಿಟ್ಟುಕೊಳ್ಳಿ. ಆಗ 'ಎಐ ಮೆಂಟರ್' ಆ ವಿದ್ಯಾರ್ಥಿಗೆ ನೇರ ಉತ್ತರಗಳನ್ನು ಒದಗಿಸುವುದರ ಬದಲು ಆ ಸಮಸ್ಯೆಯನ್ನು ಬಗೆಹರಿಸಲು ಹಂತ ಹಂತವಾಗಿ ಏನೆಲ್ಲಾ ಮಾಡಬೇಕು ಎಂದು ತಿಳಿಸುತ್ತದೆ. ಅಣಕು ಸಂದರ್ಶನಗಳನ್ನು ನಡೆಸಲು ಹೆಚ್ಚು ಪೂರಕವಾಗಿದೆ. ಸಹಜವಾಗಿ ನಡೆಯುವ ಸಂದರ್ಶನಗಳಂತೆಯೇ ಇದೂ ಸಂದರ್ಶನ ನಡೆಸಿ ಉದ್ಯೋಗಿಗಳನ್ನು ಆಯ್ಕೆ ಮಾಡುತ್ತದೆ.

ಆಯ್ದ ವ್ಯಕ್ತಿಗಳನ್ನು ಬಳಸಿಕೊಂಡು ಎಐ ಮೆಂಟರ್ ಅನ್ನು ಈಚೆಗೆ ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಲಾಗಿತ್ತು. ಈ ವೇಳೆ ಇದು ಗಮನಾರ್ಹ ಸಾಧನೆ ತೋರಿದೆ. ಪರೀಕ್ಷೆ ವೇಳೆ ಇದು 400,000ಕ್ಕೂ ಹೆಚ್ಚು ಕೋಡಿಂಗ್ ಸುಳಿವುಗಳನ್ನು ಉತ್ಪಾದಿಸಿದೆ. 130,000 ವಿದ್ಯಾರ್ಥಿಗಳ ಸಂದೇಹಗಳು ಹಾಗೂ ಪ್ರಶ್ನೆಗಳನ್ನು ಬಗೆಹರಿಸಿದೆ. ಜೊತೆಗೆ 300ಕ್ಕೂ ಅಧಿಕ ಮಾಕ್ ಇಂಟರ್‌ವ್ಯೂಗಳನ್ನು ಯಶಸ್ವಿಯಾಗಿ ನಡೆಸಿ ಎಲ್ಲರ ಹುಬ್ಬೇರುವಂತೆ ಮಾಡಿದೆ ಎಂದಿದ್ದಾರೆ ಗ್ರೇಟ್ ಲರ್ನಿಂಗ್‌ನ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್ ಲಖಂರಾಜು.

## ಏನಿದು ಎಐ ಟೀಚರ್?

ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ವೈಯಕ್ತಿಕವಾಗಿ ಹಾಗೂ ಪರಿಣಾಮಕಾರಿಯಾಗಿ ಬೋಧನೆ ಮಾಡುವ ಕೌಶಲವನ್ನು ಎಐ ಟೀಚರ್‌ಗೆ ಫೀಡ್ ಮಾಡಲಾಗಿದೆ. ಹೊಸ ಹೊಸ ವಿಧಾನದ, ವೈಯಕ್ತಿಕ ಮತ್ತು ಸಂವಾದಾತ್ಮಕವಾಗಿ ಕಲಿಸುವ ಕೌಶಲ ಹೊಂದಿದೆ.

ಪಾಠಗಳನ್ನು ಕಸ್ಟಮೈಸ್ ಮಾಡುತ್ತದೆ. ವಿದ್ಯಾರ್ಥಿಗಳ ತಿಳಿವಳಿಕೆಯನ್ನು ಕಾಲಕಾಲಕ್ಕೆ ಮೌಲ್ಯಮಾಪನ ಮಾಡುತ್ತದೆ. ವಿದ್ಯಾರ್ಥಿಗಳ ನಡುವಿನ ಜ್ಞಾನದ ಅಂತರವನ್ನು ಗುರುತಿಸಿ, ಅವರನ್ನು ತಿದ್ದುವ ಕಾರ್ಯವನ್ನೂ ಮಾಡುತ್ತದೆ. ಒಬ್ಬ ನುರಿತ ಶಿಕ್ಷಕ ಮಾಡುವ ಎಲ್ಲ ಕೆಲಸಗಳನ್ನೂ ಈ ಎಐ ಟೀಚರ್ ಮಾಡುತ್ತದೆ. ■